

ಚಿತ್ರ: ಗೋವಿಂದರಾಜ ಜವಳಿ

ಬಿಡಿ. ಇಲ್ಲಿಯ ಮಣ್ಣಿಗೆ ನೀರು ಬಸಿದು ಹೋಗುವ ಗುಣವುಂಟು. ಮಳೆ ನೀರು ಬೇಗ ಹರಿದು ಹೋಗುವ ಕಾರಣ ಇಲ್ಲಿ ಅಷ್ಟಾಗಿ ಪ್ರವಾಹ ಪರಿಸ್ಥಿತಿ ಉಂಟಾಗ್ತಿರ್ಲಿಲ್ಲ. ಆದರೆ ಇತ್ತೀಚಿನ ವರ್ಷಗಳಲ್ಲಿ ಇಲ್ಲಿಯ ಪರಿಸ್ಥಿತಿ ಕೂಡ ಬದಲಾಗ್ತಿದೆ. ರಸ್ತೆ ಅಗಲೀಕರಣ ಮತ್ತು ಅಭಿವೃದ್ಧಿಯ ಹೆಸರಿನಲ್ಲಿ ಎಲ್ಲಾ ಕಡೆ ಕಟ್ಟಡ ನಿರ್ಮಾಣ ಮಾಡ್ತಾ ಇದ್ದಾರೆ, ಅರಣ್ಯ ನಾಶ ಆಗ್ತಾ ಉಂಟು. ರಸ್ತೆಯ ಬದಿಯ ಮರ ಎಲ್ಲ ಕಡೀತಾ ಇದ್ದಾರೆ. ಅಕಾಲಿಕ ಮಳೆ ಬರ್ತಾ ಉಂಟು. ಅರ್ಧಕ್ಕೆ ನಿಂತಿರುವ ಅಭಿವೃದ್ಧಿ ಕಾಮಗಾರಿಗಳಿಂದಾಗಿ ನೀರು ಸರಾಗವಾಗಿ ಹರಿದು ಹೋಗ್ಲಿಕ್ಕೆ ಅವಕಾಶ ಇಲ್ಲ. ನಗರ, ಪಟ್ಟಣ ರಸ್ತೆಗಳು, ತಗ್ಗು ಪ್ರದೇಶದ ಬೇಸಾಯದ ಗದ್ದೆಗಳು, ಅಡಿಕೆ, ತೆಂಗಿನ ತೋಟಗಳು ಮಳೆಗಾಲದಲ್ಲಿ ಜಲಾವೃತಗೊಳ್ತವೆ. ಈ ವರ್ಷ ಕರಾವಳಿ ಜಿಲ್ಲೆಗಳಲ್ಲಿ ಮಳೆ ಸ್ವಲ್ಪ ಜಾಸ್ತಿಯೇ ಬರ್ತಾ ಉಂಟು.

ನಮ್ದು ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆ ಉಂಟಲ್ಲ, ಅದು ಬಹಳ ಹಿಂದಿನ ಕಾಲದಿಂದಲೂ ವ್ಯಾಪಾರ, ವಹಿವಾಟು, ಸ್ವಾತಂತ್ರ್ಯ ಸಂಗ್ರಾಮ, ಬ್ಯಾಂಕಿಂಗ್, ಶಿಕ್ಷಣ, ಆರೋಗ್ಯ ಸೇವೆ ಮೊದಲಾದ ಕ್ಷೇತ್ರಗಳಿಗೆ ಹೆಸರುವಾಸಿ. ಭಾಷೆ, ಧರ್ಮ ಮತ್ತು ಕೋಮು ಸಾಮರಸ್ಯಕ್ಕೆ ಕೂಡ ಇಲ್ಲಿ ಚೆನ್ನಾಗಿಯೇ ಉಂಟು. ಇಲ್ಲಿ ತಲೆಮಾರುಗಳಿಂದ ಹಿಂದೂ, ಜೈನ, ಕ್ರೈಸ್ತ, ಮುಸಲ್ಮಾನ ಮೊದಲಾದ ಧರ್ಮಗಳ ಜನರು ವಾಸವಾಗಿದ್ದಾರೆ. ಮಂಗಳೂರು ನಗರದ ಒಳಗಡೆನೇ ಸುಮಾರು ದೇವಸ್ಥಾನಗಳು, ಮಸೀದಿಗಳು, ಚರ್ಚುಗಳು, ಜೈನ ಬಸದಿಗಳು ಹತ್ತಿರ ಹತ್ತಿರದಲ್ಲೇ ಇವೆ. ಬ್ಯಾಂಕಿಂಗ್ ಉದ್ಯಮದ ತೊಟ್ಟಿಲು, ಉನ್ನತ ಶಿಕ್ಷಣದ ಮಡಿಲು, ಧರ್ಮ ಸಮನ್ವಯತೆ ಬೀಡು ಅಂತೆಲ್ಲ ದಕ್ಷಿಣ ಕನ್ನಡ ಜಿಲ್ಲೆ ಫೇಮಸ್ ಇತ್ತು. ತುಳು, ಕೊಂಕಣಿ, ಕನ್ನಡ, ಉರ್ದು, ಮಲೆಯಾಳಂ, ಬ್ಯಾರಿ ಭಾಷೆ ಮಾತಾಡುವ ಜನರೆಲ್ಲ ಅಕ್ಕ ಪಕ್ಕದಲ್ಲಿ ವಾಸ ಮಾಡುತ್ತಾರೆ. ಮಾತೃಭಾಷೆ ಯಾವುದೇ ಇದ್ದರೂ ಸುಮಾರಾಗಿ ಎಲ್ಲರಿಗೂ ತುಳು ಭಾಷೆ ಗೊತ್ತಿರ್ತದೆ. ಆಟೋರಿಕ್ಷಾಗಳಲ್ಲಿ, ಬಸ್ಸುಗಳಲ್ಲಿ, ಕಿರಾಣಿ ಅಂಗಡಿಗಳಲ್ಲಿ, ಮೀನು, ಮಾಂಸ, ತರಕಾರಿ, ಹಣ್ಣು ಹಂಪಲು ಮಾರುಕಟ್ಟೆಯಲ್ಲಿ ವ್ಯವಹಾರದ ಭಾಷೆ ಕೂಡ ತುಳು. ಗೆಳೆಯರ ನಡುವೆ 'ಓಲ್ಲಂಬೆ ಬೇವರ್ಸಿ' ಎನ್ನುವುದು ಪ್ರೀತಿಯ ಬೈಗುಳ. ಯಾರಿಗಾದರೂ ತಲೆ ಕೆಟ್ಟಿದೆ ಅಂತ ಹೇಳಬೇಕಾದರೆ ಮಂಡೆ ಸರಿಯಿಲ್ಲ, ಪೆಟ್ಟ್ ಕಮ್ಮಿ ಅಂತ ಹೇಳುವುದು. ತಲೆನೋವು ಅಂತ ಹೇಳುವ ಕ್ರಮವೇ ಇಲ್ಲ. ಮಂಡೆಬೆಚ್ಚ ಅಂತ ಹೇಳುವುದು. ಇದೆಲ್ಲ ತುಳು ಭಾಷೆಯ ಪ್ರಭಾವ.

ಹಾಂ, ಯಾಕೆ ಇವರು ಮಂಗ್ಳೂರಿನ ವಿಷಯ ಇಷ್ಟೆಲ್ಲ ಹೇಳ್ತಿದ್ದಾರೆ ಅಂತ ನೀವು ಕೇಳಿದ್ರೆ ಅದಕ್ಕೂ ಕಾರಣ ಉಂಟು. ದ್ವೇಷ ರಾಜಕಾರಣ ಮತ್ತು ಪ್ರಚೋದನಕಾರಿ ದ್ವೇಷ ಭಾಷಣ ಮಾಡುವ, ಸ್ವಯಂ ಘೋಷಿತ ಧರ್ಮ, ಸಂಸ್ಕೃತಿ ರಕ್ಷಕರೆಂದು ತೋರಿಸಿಕೊಳ್ಳುವ ಕೆಲವೇ ಕೆಲವು ಜನರಿಂದ ಅವಿಭಜಿತ ದಕ್ಷಿಣ ಕನ್ನಡ ಜಿಲ್ಲೆಯ ಸೌಹಾರ್ದಮಯ ವಾತಾವರಣ ಹಾಳಾಗ್ತಿದೆ. ಕೋಮು ದ್ವೇಷದ ಕಾರಣಕ್ಕಾಗಿ ಕೆಲವು ವರ್ಷಗಳಿಂದ ಈಚೆಗೆ ಹಲವರ ಹತ್ಯೆಯಾಗಿದೆ. ಹಾಗಾಗಿ ಹೊರಗಿನವರಿಗೆ ಮಂಗ್ಳೂರೆಂದರೆ ಈಗ ಹೆದರಿಕೆ. ಕೋಮು ಸೌಹಾರ್ದ ಕೆಡಿಸುವ ಸಣ್ಣ ಪುಟ್ಟ ಘಟನೆಗಳನ್ನು ಸಹ ವೈಭವೀಕರಿಸುವ ಆಧುನಿಕ ದೃಶ್ಯ ಮಾಧ್ಯಮಗಳ ದೆಸೆಯಿಂದಾಗಿ ಮಂಗ್ಳೂರಿನ ಹಾದಿಬೀದಿಗಳಲ್ಲಿ ಪ್ರತಿ ನಿತ್ಯ ಕೊಲೆ, ರಕ್ತಪಾತ, ಹಿಂಸಾಚಾರ ನಡೀತದೆ ಅಂತ ಹೊರಗಿನವರು ಭಾವಿಸ್ತಾರೆ ಮತ್ತು ಮಂಗ್ಳೂರಿನ ಕುರಿತು ಅನಗತ್ಯ ಭಯಪಡ್ತಾರೆ. ಅದು ತಪ್ಪು ಅಭಿಪ್ರಾಯ. ಪ್ರತಿ ದಿವ್ಸ ಇಲ್ಲಿ ಹಾಗೇನೂ ನಡೆಯುವುದಿಲ್ಲ. ಜನಸಾಮಾನ್ಯರು ಈಗಲೂ ಸೌಹಾರ್ದಮಯ ಜೀವನ ನಡೆಸ್ತಾ ಇದ್ದಾರೆ. ಖಾಸಗಿ ದೃಶ್ಯ ಮಾಧ್ಯಮಗಳು ತೋರಿಸುವಂತಹ ವಾತಾವರಣ ಖಂಡಿತ ಇಲ್ಲ. ಕೆಲವರು ನಿಮಗೆ ಮಂಗ್ಳೂರಿನಲ್ಲಿ ಇರ್ಲಿಕ್ಕೆ ಹೆದರಿಕೆ ಆಗುವುದಿಲ್ಲವಾ ಅಂತ ಕೇಳಿದ್ದೂ ಉಂಟು. ಯಾರಿಗೇ ಆದರೂ ಸ್ವಂತದ ಊರಿಗಿಂತ ಹೆಚ್ಚಿನ ಭದ್ರತೆಯ ಭಾವನೆಯನ್ನು ಕೊಡುವ ಬೇರೆ ಯಾವುದಾದರೂ ಊರು ಇರ್ತದಾ? ಹಾಗಾಗಿ ಮಂಗ್ಳೂರಿನ ವಿಷಯದಲ್ಲಿ ತಪ್ಪು ಕಲ್ಪನೆ ಬೇಡ. ಸುಮ್ನೆ ಭಯಪಡುವ ಅಗತ್ಯವಿಲ್ಲ. ಮಂಗ್ಳೂರಿನ ಜನ ಮಾತಾಡುವುದು ಸ್ವಚ್ಛ ಕನ್ನಡ. ಅದನ್ನು ಗೇಲಿ ಮಾಡ್ಬೇಡಿ ಅಂತ ಹೇಳ್ತಾ ಎಲ್ಲರಿಗೂ ನಮಸ್ಕಾರ.

ಕಳೆದ ವಾರದ
'ಚೆನ್ನುಡಿ'
ಸ್ವರ್ಗ ನಮ್ ದುರ್ಗ...
ಕೇಳಿ ಅಶ್ವಿನಿ ಎಸ್.ಟಿ.
ಅವರ ಧ್ವನಿಯಲ್ಲಿ

ಪಾಡ್‌ಕಾಸ್ಟ್
ಕೇಳಲು
ಕ್ಯೂಆರ್
ಕೋಡ್ ಸ್ಕ್ಯಾನ್
ಮಾಡಿ.

